ಓ ಎಸ್ ನಂ. 5/2015
ಪಿ ಡಬ್ಲ್ಯೂ: 1
ದಿನಾಂಕ 28-02-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 3ನೇ ಪ್ರತಿವಾದಿ ಪರಃ ಶ್ರೀ ಕೆ ಎಸ್ ಆರ್ ವಕೀಲರಿಂದಃ

ಸಗುನಿರಂಗಪ್ಪ ಮತ್ತು ಅವರ ಇಬ್ಬರು ಮಕ್ಕಳು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಊರಿನಲ್ಲೆ ಇದ್ದಾರೆ ಎಂದು ನುಡಿದಿರುತ್ತಾರೆ. ಮೂಲಪುರಷ ಸತ್ತಪ್ಪ ಯಾನೆ ಸತ್ತಣ್ಣ ಇವರಿಗೆ ಗಂಡು ಮಕ್ಕಳನ್ನು ಹೊರತು ಪಡಿಸಿ ಹೆಣ್ಣು ಮಕ್ಕಳು ಇಲ್ಲ ಎಂದರೆ ನಿಜ. ನಾನು ದಾವೆಯನ್ನು ಹೂಡಿದ ನಂತರ 6 ನೇ ಪ್ರತಿವಾದಿ ಮರಣ ಹೊಂದಿದ್ದಾರೆ ಎಂದರೆ ನಿಜ. 6 ನೇ ಪ್ರತಿವಾದಿಯ ಹೆಂಡತಿ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯ ಹೆಂಡತಿ ಹೆಸರು ತಿಮ್ಮಮ್ಮ ಮತ್ತು ಮಕ್ಕಳು ಕುಮಾರಪ್ಪ, ನರಸಿಂಹಮೂರ್ತಿ, ವೆಂಕಟೇಶ ಮತ್ತು ಓಂಕಾರಪ್ಪ ಆಗಿರುತ್ತಾರೆ.

ನನ್ನ ತಂದೆ ತಾಯಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳೇ ಹೆಣ್ಣು ಮಗಳು. ಅವರೆಂದರೆ ಹನುಮಂತಪ್ಪ, ನಾನು ಮತ್ತು ಜಯಮ್ಮ. ಜಯಮ್ಮನವರನ್ನು ಎಮ್ಮೆದೊಡ್ಡಿಯ ರಂಗೇನಹಳ್ಳಿಗೆ ಮದುವೆ ಮಾಡಿಕೊಟ್ಟಿರುತ್ತೇವೆ. ಜಯಮ್ಮ ನನಗೆ ತಂಗಿಯಾಗಬೇಕು. ನಾನು ಈ ದಾವೆಯಲ್ಲಿ ಜಯಮ್ಮನವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೂ 3 ರಿಂದ 5 ನೇ ಪ್ರತಿವಾದಿ ಕುಟುಂಬಕ್ಕೂ ಮಾತುಕತೆ ಅಷ್ಟಕ್ಕೆ ಅಷ್ಟೆ ಎಂದರೆ ನಿಜ. ಸರ್ವೆ

ನಂ.152/2 ನ್ನು ಗೋವಿಂದಪ್ಪ ಮತ್ತು ಅವರ ಕುಟುಂಬ 67,500 ರೂಗಳಿಗೆ 3 ನೇ ಪ್ರತಿವಾದಿಯಿಂದ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಆದಾಯದಿಂದಲೇ ಖರೀದಿಸಲಾಗಿದೆ ಎಂದು ನುಡಿದಿರುತ್ತಾರೆ.

ದಾವಾ ಆಸ್ತಿಗಳನ್ನು ಬಿಟ್ಟರೆ ನಮ್ಮ ಕುಟುಂಬದ ಮೂಲ ಪುರಷನಿಗೆ ವಾಸದ ಮನೆ ಮತ್ತು ನಿವೇಶನಗಳು ಇವೆ. ಮೂರು 4 ಅಂಕಣದ ಮನೆಗಳು ಮತ್ತು 7-8 ನಿವೇಶನಗಳು ಇವೆ. ಎಲ್ಲಾವೂ ಸಹ ಸತ್ತಪ್ಪನಿಗೆ ಸೇರಿದವುಗು. ಸದರಿ ಮನೆ ಮತ್ತು ನಿವೇಶನಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಿವೇಶನಗಳಿಗೆ ಸಂಬಂದಪಟ್ಟ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಎಂದರೆ ಸರಿಯಲ್ಲ.

1990-91 ರಲ್ಲಿ ಸತ್ತಪ್ಪನ ಮಕ್ಕಳಲ್ಲಿ ವಿಭಾಗವಾಗಿ ಬೇರೆ ಬೇರೆ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆಗಬಾರದೆಂದು ನಾನು ಯಾವುದೇ ತಕರಾರನ್ನು ರೆವಿನ್ಯೂ ಇಲಾಖೆಗೆ ನೀಡಿಲ್ಲ. ಸಾಕ್ಷಿ ಮುಂದುವರೆದು ನಾನು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವ ಸಲುವಾಗಿ ತಕರಾರನ್ನು ಸಲ್ಲಿಸಿರುವುದಿಲ್ಲವೆಂದು ನುಡಿದಿರುತ್ತಾರೆ. ಸರ್ವೆ ನಂ.152/2 ಪಿ1, 163/ಪಿ4, 9/2, 162/1 ರಲ್ಲಿ 3 ನೇ ಪ್ರತಿವಾದಿ ಸಾಲವನ್ನು ಪಡೆದಿದ್ದಾರೆ ಎಂದರೆ ನಿಜ. ಅದಕ್ಕೆ ನಾನು ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ.

ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳಲ್ಲಿ 3 ನೇ ಪ್ರತಿವಾದಿ ಹೆಸರಿಗೆ ಖಾತೆಯಾಗಬಾರದೆಂದು ಸಲ್ಲಿಸಿರುವ ತಕರಾರು

ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.11 ರ ಆಸ್ತಿಯಾದ ಸರ್ವೆ ನಂ.4/4 ಪಿ22 ಮೂಲತಃ ಸರ್ಕಾರದ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಆಸ್ತಿ ಎಂದು ನುಡಿದಿರುತ್ತಾರೆ. ದಾವಾ ಐಟಂ ನಂ.11 ರ ಆಸ್ತಿಯು ಮೂಲತಃ ಯಾರಿಗೆ ಸೇರಿದ್ದೆಂದು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಐಟಂ ನಂ.11 ರ ಆಸ್ತಿಯು 3 ನೇ ಪ್ರತಿವಾದಿಯ ಅಜ್ಜಿಯಾದ ಸಗುನಮ್ಮನವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಆಸ್ತಿ ಎಂದು ನುಡಿದಿರುತ್ತಾರೆ.

ಈ ದಾವೆಯನ್ನು ಸಲ್ಲಿಸಿದ ನಂತರ ಪ್ರತಿವಾದಿಗಳು ಈ ಕೇಸಿನಲ್ಲಿ ಸಲ್ಲಿಸಿರುವ ದಾಖಲೆ ಮತ್ತು ತಕರಾರುಗಳ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ಪ್ರತಿವಾದಿಗಳು ಏನು ತಕರಾರು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಅವರು ಸಹ ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ. ದಾವಾ ಐಟಂ ನಂ.5 ರಲ್ಲಿ 3 ನೇ ಪ್ರತಿವಾದಿ ಮನೆ ಕಟ್ಟಿರುತ್ತಾರೆ ಎಂದರೆ ನಿಜ. ನಮ್ಮ ಕುಟುಂಬದ ಆಸ್ತಿಗಳು ವಿಭಾಗವಾಗಿವೆ ಎಂದರೆ ಸರಿಯಲ್ಲ, ಒಟ್ಟು ಕುಟುಂಬದಲ್ಲೆ ಇವೆ.

ದಾವಾ ಐಟಂ ನಂ.9 ರ ಆಸ್ತಿಯನ್ನು 3 ನೇ ಪ್ರತಿವಾದಿ 2001 ರಲ್ಲಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಆದಾಯದಿಂದಲೇ ಖರೀದಿಸಲಾಗಿದೆ ಎಂದು

ನುಡಿದಿರುತ್ತಾರೆ. ನಮ್ಮ ಕುಟುಂಬಕ್ಕೂ ಮತ್ತು 3ನೇ ಪ್ರತಿವಾದಿ ಕುಟುಂಬಕ್ಕೂ ಬೇರೆ ಬೇರೆ ಪಡಿತರ ಚೀಟಿ ಇದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಸರ್ಕಾರದ ಸವಲತ್ತನ್ನು ಪಡೆಯುವ ಸಲುವಾಗಿ ಬೇರೆ ಬೇರೆ ಪಡಿತರ ಚೀಟಿಯನ್ನು ಮಾಡಿಸಿದ್ದೇವೆ ಎಂದು ನುಡಿದಿರುತ್ತಾರೆ. ನಮ್ಮ ಕುಟುಂಬದಲ್ಲಿ ಈಗಾಗಲೇ ವಿಭಾಗವಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಲ್ಲಾ ಆಸ್ತಿಗಳು ಒಟ್ಟುಕುಟುಂಬದಲ್ಲೆ ಇವೆ ಎಂದು ನುಡಿದಿರುತ್ತಾರೆ.

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ಈ ಕೇಸಿಗಾಗಿ ಉತಾರ್ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸತ್ತಪ್ಪನವರಿಗೆ ಸೇರಿದ ಮನೆ ಮತ್ತು ನಿವೇಶನಗಳಿಗೆ ಸಂಬಂದಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಮರಣ ಹೊಂದಿದ್ದಾರೆ ಎಂದರೆ ನಿಜ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.